**OS-240/2021**
**PW-1**

**ದಿನಾಂಕಃ 07.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿ**ವಾದಿ ಪರ** ಶ್ರೀ ಬಿ ಎಮ್ ಎನ್ **ವಕೀಲರಿಂದಃ**

ನಾನು ಯಾವುದೇ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಅನುಸೂಚಿ ಸ್ವತ್ತಿನ ಚೆಕ್ಕು ಬಂದಿ ಪೂರ್ವಕ್ಕೆ ಮಾರಮ್ಮನ ಕೊಡುಗೆ ಜಮೀನು, ಪಶ್ಚಿಮಕ್ಕೆ ಬಸವಯ್ಯರವರ ಜಮೀನು, ಉತ್ತರಕ್ಕೆ ಶಿವಮ್ಮರವರ ಜಮೀನು, ದಕ್ಷಿಣಕ್ಕೆ ಕರಿಗೌಡರವರ ಮಗ ನಿಂಗೇಗೌಡರವರ ಜಮೀನು. ಸದರಿ ಚೆಕ್ಕು ಬಂದಿಯ ಒಳಗಿನ 15 ಗುಂಟೆ ಜಮೀನಿಗೆ ನಾನು ಈ ದಾವೆ ಸಲ್ಲಿಸಿರುತ್ತೇನೆ. ದಾವಾ ಅನುಸೂಚಿ ಸ್ವತ್ತು ನನ್ನ ಹೆಸರಿಗೆ ಖಾತೆಯಾಗಿರುವುದಿಲ್ಲ. ನಿಪಿ-1 ರ ಕ್ರಯ ಪತ್ರವು ನೊಂದಣಿಯಾಗಿರುವುದಿಲ್ಲ. ಸದರಿ ನಿಪಿ-1 ರ ಕ್ರಯ ಪತ್ರವನ್ನು 1995 ರಲ್ಲಿ ಬರೆದುಕೊಟ್ಟಿರುತ್ತಾರೆ. ನಿಪಿ-1 ರ ಕ್ರಯ ಪತ್ರವನ್ನು ತಮ್ಮಯಪ್ಪ ಎಂಬುವವರು ಬರೆದಿರುತ್ತಾರೆ. ಸದರಿ ನಿಪಿ-1 ರ ಕ್ರಯ ಪತ್ರಕ್ಕೆ ನಂಜುಂಡಯ್ಯ ಮತ್ತು ಸಿದ್ದಯ್ಯರವರು ಸಾಕ್ಷಿದಾರಾಗಿ ಸಹಿ ಮಾಡಿರುತ್ತಾರೆ. ನಿಪಿ-1 ಕ್ರಯ ಪತ್ರದಲ್ಲಿ ಸರ್ವೆ ನಂಬರ್ 248 ಎಂದು ನಮೂದಾಗಿರುತ್ತದೆ.

ನಾನು ಈ ದಾವೆಯನ್ನು ಸರ್ವೆ ನಂಬರ್ 248 ರಲ್ಲಿ 15 ಗುಂಟೆ ಜಮೀನಿಗೆ ಸಲ್ಲಿಸಿರುತ್ತೇನೆ. ಸರ್ವೆ ನಂಬರ್ 248/1 ರಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ 15 ಗುಂಟೆ ಜಮೀನಿನ ಪಹಣಿ ಪತ್ರಿಕೆ ಇರುತ್ತದೆ ಎಂದರೆ ಸರಿ. ಸದರಿ ಜಮೀನಿನ ಖಾತೆಯು 1 ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿರುವ ಬಗ್ಗೆ ನನ್ನ ತಕರಾರು ಇರುತ್ತದೆ. ಸದರಿ 1 ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿರುವ ಖಾತೆಯನ್ನು ಪ್ರಶ್ನಿಸಿ ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. 1 ನೇ ಪ್ರತಿವಾದಿಯು ನನ್ನ ವಿರುದ್ಧ ಈ ಹಿಂದೆ ಸಲ್ಲಿಸಿದ್ದ ದಾವೆಯಲ್ಲಿ ಪ್ರಸ್ತುತ ದಾವೆಯಲ್ಲಿ ನಮೂದಿಸಿರುವ ಚೆಕ್ಕು ಬಂದಿಯನ್ನು ನಮೂದಿಸಿದ್ದರು.

ಸರ್ವೆ ನಂಬರ್ 248/1 ರಲ್ಲಿರುವ 15 ಗುಂಟೆ ಜಮೀನನ್ನು 1 ರಿಂದ 4 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಯ ಪರವಾಗಿ 2014 ರಲ್ಲಿ ಬೋಗ್ಯ ಮಾಡಿದ್ದಾರೆ ಎಂದರೆ ಸರಿ. ಸದರಿ ಬೋಗ್ಯ ಪತ್ರವನ್ನು ನಾನು ನಿಪಿ-3 ಆಗಿ ಹಾಜರು ಪಡಿಸಿದ್ದೇನೆ ಎಂದರೆ ಸರಿ. ಸದರಿ ನಿಪಿ-3 ರ ಬೋಗ್ಯ ಪತ್ರವನ್ನು ನಾನು ದಿನಾಂಕ 06.01.2015 ರಲ್ಲಿ ಉಪ ನೊಂದಣಾಧಿಕಾರಿಗಳ ಕಛೇರಿಯಿಂದ ಪಡೆದುಕೊಂಡಿದ್ದೇನೆ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತು ನನ್ನ ಹೆಸರಿಗೆ ದಾಖಲಾದ ಬಗ್ಗೆ ಯಾವುದೇ ಕಂದಾಯ ದಾಖಲಾತಿಗಳು

ಇರುವುದಿಲ್ಲ. ನಿಪಿ-3 ರ ಬೋಗ್ಯ ಪತ್ರದಲ್ಲಿ ಸರ್ವೆ ನಂಬರ್ 248/1 ರಲ್ಲಿ 15 ಗುಂಟೆ ಜಮೀನಿನ ಸ್ವಾಧೀನವನ್ನು 5 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದಾರೆ ಎಂದು ನಮೂದಿಸಿದೆ ಎಂದರೆ ಸರಿಯಲ್ಲ. ಯಾವುದೇ ಒಂದು ಆಸ್ತಿಯನ್ನು ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಬೇಕು ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರ ಪಂಚಾಯತಿ ಕ್ರಯ ಪತ್ರವನ್ನು ಈ ದಾವೆಗಾಗಿ ಸೃಷ್ಟಿ ಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನಿಂದ ಯಾವುದೇ ಹಣವನ್ನು ಪಡೆದುಕೊಂಡು ನಿಪಿ-1 ರ ಕ್ರಯ ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿಗಳು ನನಗೆ ದಾವಾ ಅನುಸೂಚಿ ಸ್ವತ್ತಿನ ಸ್ವಾಧೀನತೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನಲ್ಲಿ ನಾನು ಎಂದಿಗೂ ಸ್ವಾಧೀನತೆಯನ್ನು ಹೊಂದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ